


# ಶಂಕರಾಭರಣ ನರಸಯ್ಯ


ಕಥೆ: ಮೋಹನಾ ಸೂರ್ಯನಾರಾಯಣನ್ ಚಿತ್ರ : ಕೋವಿ




5 ಅನೇಕ ದಿನಗಳಾದ ಮೇಲೆ ನಾನು ಬಂದಿದ್ದೇನೆ. ನಾನು ನನ್ನ ಪಟ್ಟಣಕ್ಕೆ ಇಂದೇ ಹೋಗಬೇಕು. ನನಗೆ ಹಣದ ಅಗತ್ಯವಿದೆ. ಬೇರೆಯವರನ್ನು ಕೇಳಲು ನನಗೆ ಹಿಂಜರಿಕೆ.
ನನ್ನ ಬಳಿ ಕೇಳಲು ನೀನೇಕೆ ಹಿಂಜರಿಯುತ್ತಿದ್ದೀಯಾ? ನಿನಗೆಷ್ಟು ಹಣ ಬೇಕು?
6 ನನಗೆ ಎಂಬತ್ತು ಚಿನ್ನದ ನಾಣ್ಯಗಳನ್ನು ಸಾಲವಾಗಿ ಕೊಡಿ. ಬೇಗನೆ ಅದನ್ನು ನಾನು ಹಿಂದಿರುಗಿಸುತ್ತೇನೆ.
ಹಾಗಿದ್ದರೆ, ನೀನು ಏನನ್ನು ಪಣವಾಗಿ ಇಡುವೆ?
ಒಂದೇ ಆಭರಣ - ನನ್ನ ರಾಗ ಶಂಕರಾಭರಣವನ್ನು. ಕಣ್ಣು ಅದನ್ನು ಕಾಣಲಾಗದು. ಕಿವಿಗಳು ಅದನ್ನು ಕೇಳಬಹುದು ಅಷ್ಟೆ.
7 ಕೃತಜ್ಞತೆಗಳು. ಸಾಲವನ್ನು ತೀರಿಸಿದ ನಂತರ ಮಾತ್ರವೇ ನಾನು ಈ ರಾಗವನ್ನು ಕಛೇರಿಗಳಲ್ಲಿ ಹಾಡುತ್ತೇನೆ.
ಅಯ್ಯೋ ಸಾಕಪ್ಪಾ ನಿನ್ನ ಆಟ. ನಾನು ನಿನಗೆ ಚಿನ್ನದ ನಾಣ್ಯಕೊಡುತ್ತೇನೆ. ತೆಗೆದುಕೊಂಡು ಹೋಗು.
8 ಸಾಲ ತೆಗೆದುಕೊಂಡ ನಂತರ ಅವನು ಯಾವ ಕಛೇರಿಯಲ್ಲೂ ಶಂಕರಾಭರಣ ರಾಗವನ್ನು ಹಾಡಲಿಲ್ಲ. ಅವನ ಸಂಗೀತ ರಸಿಕರು ಎಷ್ಟೇ ಒತ್ತಾಯಿಸಿದರೂ, ಅವನು ಅವರಿಂದ ತಪ್ಪಿಸಿಕೊಳ್ಳುತ್ತಿದ್ದ. ವಾಲಿಸ್ ಅಪ್ಪರಾಯ ಎಂಬ ಶ್ರೀಮಂತನ ಮದುವೆಯ ಸಮಾರಂಭಕ್ಕೆ ನರಸಯ್ಯನ ಸಂಗೀತ ಏರ್ಪಾಡಾಗಿತ್ತು.
ನರಸಯ್ಯನ ಸಂಗೀತವೇ ಇವತ್ತಿನ ವಿಶೇಷ. ಅವನು ಶಂಕರಾಭರಣ ರಾಗವನ್ನು ಹಾಡುವುದಿದ್ದರೆ ಎಷ್ಟು ಹೊತ್ತು ಬೇಕಾದರೂ ಕೇಳಬಹುದು.
ಇತ್ತೀಚೆಗೆ ಅವನು ಆ ರಾಗವನ್ನು ಹಾಡುತ್ತಲೇ ಇಲ್ಲ!


9
ಸ್ವಾಮಿ, ಇಂದು ನೀವು ಮುಖ್ಯ ರಾಗವಾಗಿ ಶಂಕರಾಭರಣವನ್ನು ಹಾಡಬೇಕು.
ಕ್ಷಮಿಸಿ. ಅದನ್ನು ನಾನು ಹಾಡಲಾರೆ. ಅದನ್ನು ನಾನು ಯಾರಿಗೋ ಸಾಲಕ್ಕೆ ಅಡವಿಟ್ಟಿದ್ದೇನೆ.
ಅಡವೆ? ಸ್ವಲ್ಪ ವಿವರವಾಗಿ ತಿಳಿಸಿ.
ನರಸಯ್ಯ ತಾನು ಚಿನ್ನದ ನಾಣ್ಯಕ್ಕೆ ಬದಲಾಗಿ ರಾಗವನ್ನು ಮೂಪನಾರ್‌ಗೆ ಅಡವಿಟ್ಟ ವಿಚಾರವನ್ನು ತಿಳಿಸಿದ. ಇನ್ನೂ ಆ ಸಾಲವನ್ನು ತೀರಿಸಿಲ್ಲ ಎಂದೂ ಹೇಳಿದ.


10
ಈಗಲೇ ನೀವು ಹೋಗಿ. ನರಸಯ್ಯ ಪಡೆದ ಸಾಲಕ್ಕಿಂತಲೂ ಹೆಚ್ಚಿನ ಚಿನ್ನವನ್ನು ಇರಿಸಿದ್ದೇನೆ. ಇದನ್ನು ಪಡೆದ ನಂತರ, ನರಸಯ್ಯನಿಗೆ ಶಂಕರಾಭರಣ ರಾಗವನ್ನು ಹಾಡಲು ಅನುಮತಿ ನೀಡಬೇಕೆಂದು ಒಂದು ಬರಹವನ್ನು ಬರೆಸಿಕೊಳ್ಳಿ.
ಹಾಗೆಯೇ ಆಗಲಿ.


11
ಸ್ವಾಮಿ ! ಅಪ್ಪರಾಯರು ನರಸಯ್ಯರ ಸಾಲಕ್ಕಿಂತ ಹೆಚ್ಚಿನ ಮೊತ್ತದ ಚಿನ್ನವನ್ನು ಕಳುಹಿಸಿಕೊಟ್ಟಿದ್ದಾರೆ. ನೀವು ನರಸಯ್ಯರಿಗೆ ಶಂಕರಾಭರಣ ರಾಗವನ್ನು ಹಾಡಲು ಅನುಮತಿ ಕೊಟ್ಟಿದ್ದಾಗಿ ಬರೆದುಕೊಡಿ.
ಅಯ್ಯೋ ದೇವರೇ! ಇದೆಂಥ ಪರೀಕ್ಷೆ! ನರಸಯ್ಯ ಎಂತಹ ಗೌರವಾನ್ವಿತ ವ್ಯಕ್ತಿ! ನಾನು ಅವನ ಮಾತನ್ನು ಲಘುವಾಗಿ ತೆಗೆದುಕೊಂಡಿದ್ದೆ. ಈಗಲೇ ನಾನು ನರಸಯ್ಯ ಹಾಗೂ ಅಪ್ಪರಾಯರನ್ನು ಕಾಣಲು ಹೆಚ್ಚಿನ ಕಾಣಿಕೆಗಳೊಂದಿಗೆ ಬರುತ್ತೇನೆ.




ಕಲಿಯುಗದಲ್ಲಿ ಸತ್ಯವಚನವೇ ತಪಸ್ಸು. ಅದರಿಂದಲೇ ಭಗವಂತನ ಸಾಕ್ಷಾತ್ಕಾರವಾಗುವುದು. ''ಯಾರು ಸತ್ಯದ ಮಾರ್ಗದಲ್ಲಿ ನಡೆಯವರೋ ಅವರು ಭಗವಂತನ ಮಡಿಲಲ್ಲೇ ಕುಳಿತಿದ್ದಾರೆ'' ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು.

– ಶ್ರೀಮಾತೆ ಶಾರದಾದೇವಿ